# 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ
## C.C. No.1059/2021

**CW- 4** **PW:4**

| | |
|---|---|
| ಸಾಕ್ಷಿಯ ಹೆಸರು | ಃ ವಿಜಯಕುಮಾರ ಅಪ್ಪಾಜಿ |
| ತಂದೆ/ಗಂಡನ ಹೆಸರು | ಃ ಮಲ್ಲಿಕಾರ್ಜುನ |
| ವಯಸ್ಸು | ಃ 45 ವರ್ಷ |
| ಉದ್ಯೋಗ | ಃ ವ್ಯವಹಾರ |
| ವಾಸಸ್ಥಳ | ಃ ಪಂಚಾಕ್ಷರಿ ನಗರ, ನವನಗರ, ಹುಬ್ಬಳ್ಳಿ |

ದಿಃ **26.09.2025.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಚಾಸಾಃ 1 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇಲ್ಲ. ದಿಃ 01.11.2020 ರಂದು ಚಾಸಾಃ 1 ರವರ ಮನೆಗೆ ಅವರ ಅಜ್ಜಿಗೆ ಅರಾಮ ಇಲ್ಲ ಅಂತಾ ನಾನು ಮಾತನಾಡಿಸಲು ಹೋಗಿದ್ದೆ. ನಾನು ಅಜ್ಜಯನ್ನು ಮಾತನಾಡಿಸುತ್ತಾ ಒಳಗಡೆ ಕೂತಾಗ ಆರೋಪಿ ನಂ.1 ಮತ್ತು 2 ರವರು ಮನೆ ಒಳಗಡೆ ಬಂದು ಚಾಸಾಃ 1 ರವರ ಜೊತೆ ಜಗಳ ತೆಗೆದರು. ಅಜ್ಜಿ ಮನೆಯಲ್ಲಿ ಇದ್ದ ಒಬ್ಬ ಹೆಣ್ಣು ಮಗಳ ಕೈ ಬಳೆ ಒಡೆದಿದ್ದು ಹಾಗೂ ಕೈ ಬಳೆ ಕಣ್ಣಿನ ಹತ್ತಿರ ತೆರೆಚಿತು. ಚಾಸಾಃ 1 ರವರ ಕೈಗೆ ಬಳೆ ತೆರಚಿ ಗಾಯ ಆಗಿತ್ತು. ಚಾಸಾಃ 1 ಮತ್ತು ಅವರ ಮನೆಯಲ್ಲಿದ್ದ ಹೆಣ್ಣು ಮಗಳನ್ನು ಆಸ್ಪತ್ರೆಗೆ ಚಿಕಿತ್ಸೆ ಸಲುವಾಗಿ ಕರೆದುಕೊಂಡು ಹೋದೆ. ಆಸ್ಪತ್ರೆಗೆ ಅವರನ್ನು ತೊರಿಸಿ ನಾನು ಮನೆಗೆ ಹೋದೆ. ಈ ಬಗ್ಗೆ ಪೊಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಆರೋಪಿತರನ್ನು ನೋಡಿ ಗುರುತಿಸುತ್ತೇನೆ.

ಆರೋಪಿತರು ಈ ದಿವಸ ಗೈರು ಹಾಜರು ಇದ್ದು ಶ್ರೀ ಪಿ ಬಿ ಎಮ್ ವಕೀಲರ ಸಮ್ಮತಿಯೊಂದಿಗೆ ಆರೋಪಿತರ ಗುರುತಿಸುವಿಕೆಯನ್ನು ತೆಗೆದುಕೊಳ್ಳಲಾಯಿತು.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಮನೆಯಲ್ಲಿದ್ದ ಅಜ್ಜಿ ಚಾಸಾಃ 1 ರವರ ಅಕ್ಕ ಎಂದರೆ ಸರಿ. ಆ ದಿವಸ ಆರೋಪಿತರು ಚಾಸಾಃ 1 ರವರಿಗೆ ಅವಾಚ್ಯವಾಗಿ ಕೆಟ್ಟಕೆಟ್ಟದಾಗಿ ಬೈದರು ಎಂದರೆ ಸರಿ.

**ಪಾಟಿಸವಾಲುಃ ಶ್ರೀ ಎಮ್ ಎಸ್ ಬಿ ವಕೀಲರಿಂದಃ**

ನನ್ನದು ಅಗ್ರೊ ವ್ಯವಹಾರ ಇದೆ ಹಾಗೂ ಕಾಳುಕಡಿ ವ್ಯಾಪಾರಸ್ಥ ಇದ್ದೇನೆ. ನನ್ನ ಅಂಗಡಿ ಹಾನಗಲ್ ತಾಲೂಕ ಬಮ್ಮನಳ್ಳಿಯಲ್ಲಿದೆ. ನಮ್ಮ ಅಂಗಡಿ 24 ತಾಸು ತೆರೆದಿರುತ್ತದೆ. ಸಂಪೂರ್ಣ ವ್ಯವಹಾರ ನಾನೇ ನೋಡಿಕೊಳ್ಳುತ್ತೇನೆ ಎಂದರೆ ಸರಿಯಲ್ಲ. ನನ್ನ ಕಸೀನ್ ಇದ್ದು ಅವರು ನೋಡಿಕೊಳ್ಳುತ್ತಾರೆ. ಬೆಳಿಗ್ಗೆ 7 ಗಂಟೆ ಅಥವಾ 6 ಗಂಟೆಗೆ ಹೋಗುತ್ತೇನೆ. ಪ್ರತಿದಿನ ಅಂಗಡಿಗೆ ಹೋಗುವುದಿಲ್ಲ ತಿಳಿದಾಗ ಹೋಗುತ್ತೇನೆ. ಮನೆ ಪಂಚಾಕ್ಷರಿನಗರದಲ್ಲಿದೆ ಎಂದರೆ ಸರಿ. ಚಾಸಾಃ 1 ಪಂಚಾಕ್ಷರಿ ನಗರದಲ್ಲಿ ಇರುತ್ತಾರೆ ಎಂದರೆ ಸರಿ. ನಾನು ಆ ಏರಿಯಾದ ಲೀಡರ್ ಎಂದರೆ ಸರಿ. ನಾನು ಈ ದಿವಸ ಚಾಸಾಃ 1 ರವರ ಜೊತೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ಪಂಚಾಕ್ಷರಿ ನಗರದಲ್ಲಿ ಬಹಳ ಸಂಘಗಳು ಇವೆ. ಅಪ್ಪಾಜಿ ಜನಸೇವಾ ಟ್ರಸ್ಟ ನನ್ನ ಹೆಸರನಲ್ಲೆ ಇದೆ ಎಂದರೆ ಸರಿ. ಆ ಸಂಘಕ್ಕೆ ಚಾಸಾಃ 1 ರವರು ಸದಸ್ಯರಿದ್ದಾರೆ ಎಂದರೆ ಸರಿಯಲ್ಲ. ಪಂಚಾಕ್ಷರಿ ನಗರ ಅಬಿವೃದ್ದಿ ಸಂಘದ ಸದಸ್ಯನಾಗಿಲ್ಲ. ಯಾವ ಅಜ್ಜಿ ಮನೆಗೆ ಹೊಗಿದ್ದೆ ಅಂತಾ ಹೇಳಲು ಆಗುವುದಿಲ್ಲ. ಅಜ್ಜಿಯ ಮನೆಯ ಬಾಗಿಲು ಪೂರ್ವಕ್ಕೆ ಇದೆ. ಅಜ್ಜಿಯು ನನಗೆ ಸಂಬಂದಿಕರಲ್ಲ ಎಂದರೆ ಸರಿ. ಆ ಮನೆಯಲ್ಲಿ ಎಷ್ಟು ಜನ ಇರುತ್ತಿದ್ದರು ಎಂದರೆ ನನಗೆ ಗೂತ್ತಿಲ್ಲ ಎಂದರೆ ಸರಿ. ದಿಃ 01.11.2020 ರಂದು ನಾನು ಬೆಳಿಗ್ಗೆ 11 ಗಂಟೆಗೆ ಅಜ್ಜಿ ಮನೆಗೆ ಹೋಗಿದ್ದೆ. ಈ ಘಟನೆ ಕುರಿತು ಹೇಳಿಕೆ ಕೊಡುವಂತೆ ಪೊಲಿಸರು ನನಗೆ ನೊಟಿಸ ಕೊಟ್ಟಿಲ್ಲ. ಪೊಲಿಸರು ನನ್ನ ಹೇಳಿಕೆ ಈ ಘಟನೆ ಆದನಂತರ ಪಡೆದಿದ್ದಾರೆ. ಯಾವ ತಾರಿಖಗೆ ಹೇಳಿದೆ ಪಡೆದಿದ್ದಾರೆ ಎನ್ನುವುದು ಗೊತ್ತಿಲ್ಲ. ನಾನು ಎಷ್ಟು ಬಾರಿ ಆಸ್ಪತ್ರೆಗೆ ಹೋಗಿದ್ದೇನೆ ಎನ್ನುವುದು ಲೆಕ್ಕ ಇಟ್ಟಿಲ್ಲ. ಆಸ್ಪತ್ರೆಯಲ್ಲಿ ರೋಗಿಗೆ ತಿರುಗಾಡಲು ಆಗದೇ ಇದ್ದ ಪಕ್ಷದಲ್ಲಿ ಆತನನ್ನು ಕರೆದುಕೊಂಡು ಬಂದವರ ಹೆಸರನ್ನು ಬರೆದುಕೊಳ್ಳುತ್ತಾರೆ ಎಂದರೆ ಸರಿ. ದಿಃ 01.11.2020 ರಂದು ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ನಿಪಿ.3 ಗಾಯದ ಪ್ರಮಾಣ ಪತ್ರದಲ್ಲಿ ನನ್ನ ಹೆಸರು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ತಾನು ಕಿಮ್ಸ ಆಸ್ಪತ್ರೆಗೆ ಗಾಯಾಳುವನ್ನು ಕರೆದುಕೊಂಡು ಹೋಗಿಲ್ಲ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದೆ ಎಂದು ನುಡಿಯುತ್ತಾರೆ. ಪೊಲಿಸರ ಮುಂದೆ ಯಾವ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ ಅಂತಾ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ. ಎಡಗಡೆ ಕಣ್ಣಿನ ಹತ್ತಿರ ಬಳೆಚೂರಿನಿಂದ ಗಾಯ ಆಗಿತ್ತು ಅಂತಾ ಹೇಳಿಕೆ ಕೊಟ್ಟಿದ್ದೇನೆ ಯಾವ ಕಲರಿನ ಬಳೆಚೂರಿನಿಂದ ಗಾಯ ಆಗಿತ್ತು ಎನ್ನುವುದು ಗೊತ್ತಿಲ್ಲ. ಎಷ್ಟು ಬಳೆ ಒಡೆದಿದ್ದವು ಎನ್ನುವುದು ಗೊತ್ತಿಲ್ಲ. ಚಾಸಾಃ 1 ರವರ ನನ್ನ

ಖಾಸ ಗೆಳೆಯ ಇದ್ದು ಅವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ನಾನು ಚಾಸಾಃ 1 ರವರ ಮನೆಗೆ ಹೋಗಿಲ್ಲ ಹಾಗೂ ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ**